ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 259/2022
(ಫ್ರಾಸಾ-1 ಚಾಸಾ-23 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 30.01.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಹರೀಶ್ |
| ತಂದೆಯ ಹೆಸರು | - | ದೇವಣ್ಣ |
| ವಯಸ್ಸು | - | 35 ವರ್ಷ, |
| ಉದ್ಯೋಗ | - | ಚಾಲಕ |
| ವಾಸ | - | ಕ್ಯಾಲಸನಹಳ್ಳಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ಕಂಪನಿಯ ಮಿನಿ ಬಸ್ ಸಂಖ್ಯೆ ಕೆಎ-05-ಎಡಿ-1304 ಇದರ ಚಾಲಕನಿರುತ್ತೇನೆ. ಕಂಪನಿಯ ಕೆಲಸಗಾರರನ್ನು ಪಿಕ್ ಅಪ್ಸ್ ಮತ್ತು ಡ್ರಾಪ್ ಮಾಡುತ್ತೇನೆ. ಒಟ್ಟು ದಿನಕ್ಕೆ ಎಂಟು ಟ್ರಿಪ್ ಮಾಡುತ್ತೇನೆ. ಘಟನೆಗೂ ಆರು ತಿಂಗಳು ಹಿಂದಿನಿಂದ ನಾನು ಸದರಿ ಬಸ್ ನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಗಾಡಿಯಲ್ಲಿ ಮೃತ ಸಾಗರ್ ಬರುತ್ತಿದ್ದ. ಒಂದು ಟ್ರಿಪ್ ನಲ್ಲಿ ಬಸ್ಸಿ ನಲ್ಲಿ 34 ಜನ ಬರುತ್ತಾರೆ. ನನ್ನ ಬಸ್ಸಿ ನ ನಿಲುಗಡೆ ಸ್ಥಳ ಒಂದು ಹೆಬ್ಬಗೋಡಿ, ನಾಡ್ಸನ್ ಫ್ಯಾಕ್ಟರಿ, ವಾಜಪೇಯಿ ಸರ್ಕಲ್ ಮತ್ತು ಕಂಪನಿ ಇದೆ. ಯಾರು ಯಾವ ಸ್ಥಳದಲ್ಲಿ ಇಳಿದುಕೊಳ್ಳುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಗರ್ ಈತ ಕೊನೆಯ ಬಾರಿಗೆ ನನ್ನ ಬಸ್ಸನ್ನು ಯಾವ ದಿನ ಹತ್ತಿದ ಮತ್ತು ಎಲ್ಲಿ ಇಳಿದ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಗರ್ ಕೊಲೆಯಾಗಿ ಈಗ ಸುಮಾರು ಒಂದು ವರ್ಷದ ಹಿಂದೆ ತೀರಿಕೊಂಡಿದ್ದಾನೆ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ಸಾಗರ್ ಕೊನೆಯ ಬಾರಿಗೆ ದಿಃ15.01.2022 ರಂದು ನನ್ನ ಬಸ್ಸಿ ನಲ್ಲಿ ಸಂಜೆ ಕೊನೆಯದಾಗಿ ಬಂದಿದ್ದು ಆತನನ್ನು ರಾತ್ರಿ 07.30 ಕ್ಕೆ ನಾಡ್ಸನ್ ಫ್ಯಾಕ್ಟರಿ ಹತ್ತಿರ ರಾಮಯ್ಯ ಲೇಔಟ್ ನ ಸೀತಾರಾಮನಗರ ಕ್ರಾಸ್ ಬಳಿ ಇಳಿಸಿದ್ದೇನೆ ಎಂದರೆ ಗೊತ್ತಿಲ್ಲ. ಈಗ ಓದಿ ಹೇಳಿದಂತೆ ನಿಪಿ-1 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ**</u> ಆರೋಪಿತರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು